ಶ್ರೀ ಬಿ.ಎಸ್.ಯಡಿಯೂರಪ್ಪ:-ಲೈಸೆನ್ಸ್ ಕೊಟ್ಟಿರುವ ಕಡೆ ಮಂತ್ರಿಗಳ ಹೆಸರು ಇದೆ . . . .

ಛೇರ್ಮನ್:-ಅದು ಏನೂ ರೆಕಾರ್ಡ್‌ಗೆ ಹೋಗುವುದಿಲ್ಲ. ಏನಿದ್ದರೂ ತಾವು ಬರೆದು ಕಳುಹಿಸಿ.

(ಈ ಸಮಯದಲ್ಲಿ ಭಾರತೀಯ ಜನತಾ ಪಾರ್ಟಿ ಸದಸ್ಯರು ಘೋಷಣೆಗಳನ್ನು ಕೂಗುತ್ತಾ ಸಭಾತ್ಯಾಗ ಮಾಡಿದರು.)

1992-93ನೇ ಸಾಲಿನಲ್ಲಿ ವಿತ್ತೀಯ ಕಾರ್ಯಕಲಾಪಗಳು

1992-93ನೇ ಸಾಲಿಗೆ ಸಂಬಂಧಿಸಿದ ಬೇಡಿಕೆಗಳ ಮೇಲಿನ ಚರ್ಚೆಗೆ ಮುಖ್ಯ ಮಂತ್ರಿಗಳಿಂದ ಉತ್ತರ ಹಾಗೂ ಮತಕ್ಕೆ ಹಾಕುವುದು.

ಶ್ರೀ ಎಸ್.ಬಂಗಾರಪ್ಪ:- (ಮುಖ್ಯ ಮಂತ್ರಿಯವರು):-ಮಾನ್ಯ ಸಭಾಧ್ಯಕ್ಷರೆ, ನಮ್ಮ ಇಲಾಖೆಗಳಿಗೆ ಸಂಬಂಧಪಟ್ಟ ಹಾಗೆ ಸನ್ಮಾನ್ಯ ಸದಸ್ಯರು, ಅನೇಕ ಜನ ಮಾನ್ಯ ಮಿತ್ರರು ಚರ್ಚೆಯಲ್ಲಿ ಭಾಗವಹಿಸಿ ಹಲವಾರು ವಿಷಯಗಳ ಬಗ್ಗೆ ಬೆಳಕು ಚೆಲ್ಲುತಕ್ಕ ಪ್ರಾಮಾಣಿಕ ಪ್ರಯತ್ನವನ್ನು ಮಾಡಿದ್ದಾರೆ. ನಾನು ತಮ್ಮ ಮುಖಾಂತರ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಆದರೆ ಮಾನ್ಯ ವಿರೋಧಪಕ್ಷದವರಿಗೆ ಅಭಿನಂದನೆಯನ್ನು ಸಲ್ಲಿಸತಕ್ಕ ಸಂದರ್ಭ ನನಗೆ ಸಿಗಲಿಲ್ಲವೆಂದು ನನ್ನ ಮನಸ್ಸಿಗೆ ನೋವಾಗಿದೆ. ಏಕೆಂದರೆ ಎಷ್ಟೋ ಸಾರಿ ವಿನಂತಿ ಮಾಡಿದರೂ ಕೂಡ ಅವರು ಬಂದು ಚರ್ಚೆಯಲ್ಲಿ ಭಾಗವಹಿಸಲಿಲ್ಲ. ನಾನು ಒಂದು ಮಾತಿನ ಪ್ರಯೋಗ ಮಾಡಿದರೆ ರಾಜ್ಯದ ಜನತೆ ತಿಳಿದುಕೊಳ್ಳಲಾರರು ಎಂದು ಭಾವಿಸಿದ್ದೇವೆ. ಅವರ ಮೊಂಡುತನ ಇವತ್ತು ಚರ್ಚೆಯಿಂದ ಬಲು ದೂರ ಅವರನ್ನು ಇಟ್ಟಿದೆ. ಅದಕ್ಕಾಗಿ ನನಗೆ ನೋವಾಗಿದೆ. ಮಾನ್ಯ ವಿರೋಧಪಕ್ಷದ ನಾಯಕರ ಆದಿಯಾಗಿ ಬನ್ನಿ ಈಗಲಾದರೂ ಚರ್ಚೆಯಲ್ಲಿ ಭಾಗವಹಿಸಿ ಎಂದು ನಾನು ನಿನ್ನೆ ಹೇಳಿದೆ. ಅವರು ಇಲ್ಲ, ನಾವು ಡಿಮಾಂಡ್ಸ್ ಮೇಲಿನ ಚರ್ಚೆಗೆ ಬರುವುದಿಲ್ಲವೆಂದರು. ಆದರೆ ನನಗೆ ಗೊತ್ತಿದೆ. ಅಪ್ರೊಪ್ರಿಯೇಷನ್ ಬಿಲ್ಲಿಗೆ ಬಂದು ಬೆಂಬಲ ಕೊಡುತ್ತೇವೆ ಎನ್ನುವ ಮಾತನ್ನು ಆಡಿದ್ದಾರೆ. ಅದಕ್ಕಾದರೂ ಬಂದು ಭಾಗವಹಿಸಲಿಯೆಂದು ನಾನು ಮತ್ತೊಮ್ಮೆ ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇವತ್ತು ಸರ್ಕಾರದ ಆದ್ಯಕರ್ತವ್ಯ. ನಮ್ಮ ಇಲಾಖೆಗಳಿಗೆ ಸಂಬಂಧಪಟ್ಟಂತೆ ಚರ್ಚೆಯಾಗಿರತಕ್ಕ ಸಂದರ್ಭದಲ್ಲಿ ನಾನು ಮತ್ತು ಶ್ರೀಮತಿ ನಾಗರತ್ನಮ್ಮನವರು, ಮಾನ್ಯ ಮಂಜುನಾಥ್‌ರವರು, ಸಣ್ಣ ಉಳಿತಾಯ ಖಾತೆಯ ರಾಜ್ಯ ಸಚಿವರು, ನಾವೆಲ್ಲರೂ ಉತ್ತರ ಕೊಡತಕ್ಕ ಸಂದರ್ಭ ಇದೆ. ಇದು ಆದಮೇಲೆ ಧನ ವಿನಿಯೋಗ ಮಸೂದೆ ಅಂದರೆ ಅಪ್ರೊಪ್ರಿಯೇಷನ್ ಬಿಲ್ ಬರತಕ್ಕದ್ದು ಇದೆ. ನಾನು ಈ ಸಂದರ್ಭದಲ್ಲಿ ಮಾನ್ಯ ಸದಸ್ಯರುಗಳಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಎಲ್ಲ ಬೇಡಿಕೆಗಳ ಬಗ್ಗೆ ಚರ್ಚೆಯಲ್ಲಿ ಭಾಗವಹಿಸಿ ಬೆಳಕು ಚೆಲ್ಲುತಕ್ಕ ಪ್ರಾಮಾಣಿಕ ಪ್ರಯತ್ನವನ್ನು ರಾಜ್ಯದ ಜನತೆಯ ಪ್ರತಿನಿಧಿಗಳಾಗಿ ಜನತೆಯ ಹಿತದೃಷ್ಟಿಯಿಂದ ತಾವು ಚರ್ಚೆಯಲ್ಲಿ ಭಾಗವಹಿಸಿದ್ದೀರಿ. ತಾವು ಆ ಕರ್ತವ್ಯವನ್ನು ನೆರವೇರಿಸಿದ್ದೀರಿ. ನಮ್ಮ ಇಲಾಖೆಗಳಿಗೆ ಸಂಬಂಧಪಟ್ಟಂತೆ ಡಿಮಾಂಡ್ ನಂಬರ್ 15 ರಿಂದ42ರವರೆಗೆ ನನಗೆ ಸಂಬಂಧಪಟ್ಟದ್ದು. ಈ ಇಲಾಖೆಗಳ ಮೇಲೆ ಮಾತನಾಡಿರತಕ್ಕ ಹಿರಿಯ ಸದಸ್ಯರು, ಕಿರಿಯ ಸದಸ್ಯರು ಎಲ್ಲರೂ ಮಾತನಾಡಿದ್ದಾರೆ. ಅವರು ಏನೇನು ಪ್ರಾಮುಖ್ಯವಾದ ವಿಚಾರಗಳನ್ನು ಹೇಳಿದ್ದಾರೆ, ಅದಕ್ಕೆ ಅನಂತರ ಬರುತ್ತೇನೆ. ಮಾತವಾಡಿರತಕ್ಕ ಹಿರಿಯ ಸದಸ್ಯರುಗಳಾದ ಮಾನ್ಯ ಎ.ಕೆ. ಅನಂತಕೃಷ್ಣ, ವಿಶ್ವನಾಥ್, ಇದಿನಬ್ಬ, ರಾಜೂಗೌಡ, ವಾಟಾಳ್ ನಾಗರಾಜ್, ಶ್ರೀಮತಿ ರೇಣುಕರಾಜೇಂದ್ರ, ಕೆ.ಸಿದ್ದಯ್ಯ ಇತ್ಯಾದಿ ಇದ್ದರೆ ಉಳಿದಿರತಕ್ಕ ಸದಸ್ಯರು ಮಾನ್ಯ ಕರಿಯಣ್ಣನವರು, ಶಿವರಾಮೇಗೌಡರು, ಬಾಬುರಾವ್‌ಚವಾಣ್, ಇತ್ಯಾದಿ ಮಾನ್ಯ ಸದಸ್ಯರುಗಳು ಇದ್ದಾರೆ. ನಾನು ಅವರೆಲ್ಲರಿಗೂ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಅವರು ಬಹಳವಿವರವಾಗಿ ಮಾತನಾಡಿದ್ದಾರೆ. ಶ್ರೀಮಾನ್ ಅನಂತಕೃಷ್ಣರವರು ಮತ್ತಿತರ ಮಾನ್ಯ ಸದಸ್ಯರು ಯಾರೇ ಇರಬಹುದು ಅವರೆಲ್ಲ ನಮ್ಮ ಆಡಳಿತ ಯಂತ್ರದ ಬಗ್ಗೆ, ಜಿಎಡಿ, ಜನರಲ್ ಅಡ್ಮಿನಿಸ್ಟ್ರೇಟಿವ್ ಡಿಪಾರ್ಟ್‌ಮೆಂಟ್ ಬಗ್ಗೆ ಮಾತನಾಡಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಒಟ್ಟಾರೆ ಆಡಳಿತ ಯಂತ್ರ ಯಾವರೀತಿ ಇದೆ, ಹೇಗೆ ಹೋಗಬೇಕು ಎನ್ನುವ ವಿಚಾರದಲ್ಲಿ